ಸದಸ್ಯರಾದ ಬಾಬುರೆಡ್ಡಿಯವರು ಹೇಳಿದ ಹಾಗೆ ಎಲ್ಲಿ ಹಾಲನ್ನು ಮಾರಾಟ ಮಾಡಲು ಹೇಳಿದರೆ ಅಲ್ಲಿ ಹಾಲಿನ ಕೇಂದ್ರವನ್ನು ತೆಗೆದು ಮಾರಾಟ ಮಾಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಸಿ. ಎಂ. ಉದಾಸಿ.— ಮಾನ್ಯ ಸಚಿವರು ಎಲ್ಲಾ ಪಶು ತಪಾಸಣೆಗಾಗಿ ಡಾಕ್ಟರುಗಳನ್ನು ಊರು ಊರುಗಳಿಗೆ ಮತ್ತು ಎಲ್ಲೆಲ್ಲಿ ಸಹಕಾರಿ ಸಂಘಗಳಿರುತ್ತವೆ ಅಲ್ಲಿಗೆ ಕಳುಹಿಸಿಕೊಡುತ್ತೇವೆಂದು ಹೇಳಿದ್ದರು. ಪಶ್ಚಿಮ ಭಾಗದಲ್ಲಿ ಡಾಕ್ಟರುಗಳು ದೊರಕುತ್ತಿಲ್ಲ. ರೈತರಿಗೆ ಬಹಳ ತೊಂದರೆ ಯಾಗುತ್ತಿದೆ. ಕೇವಲ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಈ ವ್ಯವಸ್ಥೆ ಇರುತ್ತದೆ ಎಂದು ಸಂಶಯ ಮಾಡಲಿಕ್ಕೆ ಕಾರಣವಾಗಿದೆ. ನಮ್ಮ ಭಾಗಕ್ಕೂ ಡಾಕ್ಟರುಗಳು ಬರಲು ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.— ಆಪರೇಷನ್ ಫ್ಲಡ್-೨ ಭಾಗದಲ್ಲಿ ಬರುವ ಕಡೆ ವ್ಯವಸ್ಥೆ ಇದೆ. ಹೊಸ ಕರ್ನಾಟಕದಲ್ಲಿ ಸ್ವಲ್ಪ ತೊಂದರೆಯಾಗಿರಬಹುದು. ಅಲ್ಲೂ ಕೂಡ ಡಾಕ್ಟರುಗಳನ್ನು ಕಳುಹಿಸುವ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.— ಶ್ರೀ ಬಿ. ರಾಮದಾಸಾರವರ ಚುಕ್ಕೆ ಪ್ರಶ್ನೆ ೧೮೪ (೭೪೧)

ಸದಸ್ಯರು ಗೈರು ಹಾಜರಿ.

ಶ್ರೀಮತಿ ಮುಕ್ತ ರುನ್ನೀಸಾರವರ ಚುಕ್ಕೆ ಪ್ರಶ್ನೆ ೧೮೫ (೫೭೬)

ಸದಸ್ಯರು ಗೈರು ಹಾಜರಿ.

ತೆಳಗಿನ ಹಟ್ಟಿಗ್ರಾಮದಲ್ಲಿ ರೇಷ್ಮೆ ಚಾಕಿ ಕೇಂದ್ರ

೭೪೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನ ತೆಳಗಿನ ಹಟ್ಟಿಗ್ರಾಮದಲ್ಲಿ ರೇಷ್ಮೆ ಚಾಕಿ ಕೇಂದ್ರ ಸ್ಥಾಪಿಸಲಾಗುವುದೆ

ಆ) ಹಾಗಿದ್ದಲ್ಲಿ ಅದರ ಕೆಲಸ ಯಾವಾಗ ಪ್ರಾರಂಭಿಸಲಾಗುವುದು.

ಇ) ಹಾಗೂ ಅದರ ಅಂದಾಜು ವೆಚ್ಚವೆಷ್ಟು ?

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎಂ. ಎಲ್. ಮುತ್ತಣ್ಣವರ್.—ಮಾನ್ಯ ಅಧ್ಯಕ್ಷರೇ, ಗೋಕಾಕ್ ತಾಲ್ಲೂಕಿನ ತೆಳಗಿನ ಹಟ್ಟಿ ಗ್ರಾಮದಲ್ಲಿ ಒಂದು ರೇಷ್ಮೆ ಚಾಕಿ ಕೇಂದ್ರವನ್ನು ತೆಗೆಯಲು ಕೇಳಿದ್ದಕ್ಕೆ ಮಾನ್ಯ ಮಂಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಮಾನ್ಯ ಸಚಿವರು ಜಿಲ್ಲಾ ಪ್ರವಾಸ ಮಾಡಿದಾಗ ನೋಳಿದ್ದರು. ಈ ತಾಲ್ಲೂಕಿನಲ್ಲಿ ರೇಷ್ಮೆ ಉತ್ಪಾದನೆ ಬಹಳಷ್ಟು ಇದೆ. ಆದ್ದರಿಂದ ಚಾಕಿ ಕೇಂದ್ರದ ಅವಶ್ಯಕತೆ ಇರುತ್ತದೆ. ಆದಷ್ಟು ಬೇಗ ಚಾಕಿ ಕೇಂದ್ರದ ಸ್ಥಾಪನೆ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ಎಂ. ಮುನಿಯಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ತಪ್ಪಾಗಿ ಕೇಳಿರುತ್ತಾರೆ. ರೇಷ್ಮೆ ಜರಿ ಮಾಡತಕ್ಕಂಥ ಸಿಲ್ಕ್ ಫಿಲೇಚರ್ ಸ್ಥಾಪನೆ ಮಾಡುತ್ತೀರಾ ಎಂದು ಕೇಳಿದ್ದಾರೆ. ನಾನು ತೆಳಗಿನ ಹಟ್ಟಿ ಗ್ರಾಮಕ್ಕೆ ಪ್ರವಾಸ ಹೊಂದಂಥ ಸಂದರ್ಭದಲ್ಲಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆ ಮಾಡಬೇಕೆಂದು ಕೇಳಿದರು. ಈಗ ಅವರ ಪ್ರಶ್ನೆಗೆ ಉತ್ತರ ಹೇಳುವುದಾದರೂ ಇಷ್ಟೇ ಅಲ್ಲಿ ೨೦ ಎಕರೆಗಳಲ್ಲಿ ಮಾತ್ರ ಹಿಪ್ಪನೇರಳೆ ಬೆಳೆಯಂತಕ್ಕಂಥ ೩೦ ಬೆಳೆಗಾರರು ಇದ್ದಾರೆ. ಅಲ್ಲಿಂದ ೨ ಕಿಲೋಮೀಟರ್ ದೂರದಲ್ಲಿ ಮೂಡುವನ ಎಂದು ಇದೆ. ಅಲ್ಲಿ ಒಂದು ಚಾಕಿ ಕೇಂದ್ರವನ್ನು ನಡೆಸುತ್ತಿ

ದ್ದಾರೆ. ೨ ಕಿಲೋಮೀಟರ್ ದೂರದಲ್ಲಿ ಚಾಕಿ ಕೇಂದ್ರ ಇರುವುದರಿಂದ ಮತ್ತೊಂದು ಚಾಕಿ ಕೇಂದ್ರವನ್ನು ಅಲ್ಲಿ ಕೊಡುವುದಕ್ಕೆ ಬರುವುದಿಲ್ಲ. ಚಾಕಿ ಕೇಂದ್ರ ಬೇಕೇ ಬೇಕೆಂದರೆ ಕನಿಷ್ಟ ೨೦ ಸಾವಿರ ಮೊಟ್ಟೆಗಳನ್ನು ಚಾಕಿ ಮಾಡುವ ಮಟ್ಟಕ್ಕೆ ಆ ಗ್ರಾಮದಲ್ಲಿ ಬಂದಾಗ, ಹಿಪ್ಪನೇರಳೆ ವ್ಯವಸಾಯ ಹೆಚ್ಚಾದಾಗ ಚಾಕಿ ಸಾಕಾಣಿಕೆ ಕೇಂದ್ರವನ್ನು ಅಲ್ಲಿ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕನಕಪುರ ತಾಲ್ಲೂಕಿನಲ್ಲಿ ಖಾಸಗಿ ಮತ್ತು ಸರ್ಕಾರಿ ಜಮೀನಿನಲ್ಲಿ ಗ್ರಾನೈಟ್ ಕಲ್ಲು ಸಾಗಾಣಿಕೆ

೧೦೨೦. ಶ್ರೀ ಕೆ.ಎಲ್. ಶಿವಲಿಂಗೇಗೌಡ (ಸಾತನೂರು).—ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕಿನಲ್ಲಿ ಸರ್ಕಾರಿ ಪಲಯಕ್ಕೆ ಸೇರಿದ ಜಮೀನಿನಲ್ಲಿ ಕಲ್ಲನ್ನು ಎಷ್ಟು ಜನ ಸಾಗಾಣಿಕೆ ಮಾಡುತ್ತಿದ್ದಾರೆ ಅವರುಗಳು ಯಾರು ? (ವಿವರ ಒದಗಿಸುವುದು)

ಆ) ಅವರು ಗ್ರಾನೈಟ್ ಸಾಗಾಣಿಕೆ ಮಾಡುತ್ತಿರುವಾಗ ಗ್ರಾನೈಟ್ ಕಲ್ಲಿಗೆ ಸರ್ಕಾರದಿಂದ ಪರವಾನಗಿ ಪಡೆದು ಸಾಗಿಸುತ್ತಿದ್ದಾರೆಯೆ ಹಾಗಿದ್ದಲ್ಲಿ ಸರ್ಕಾರಕ್ಕೆ ಅಥವಾ ಮಂಡಲ ಪಂಚಾಯ್ತಿಗೆ ತೆರಿಗೆ ಕಟ್ಟುತ್ತಿದ್ದಾರೆಯೇ ?

ಇ) ಸಾರ್ವಜನಿಕರಿಂದ ಜಮೀನನ್ನು ಖರೀದಿಗೆ ಪಡೆದು ಆ ಮುಖಾಂತರ ಸರ್ಕಾರದ ಜಮೀನಿನಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲನ್ನು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಅಂತಹವರ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

ಅ) ಪಿಂಕ್ ಗ್ರಾನೈಟ್‌ಗೆ ಆರು ಲೀಸುಗಳನ್ನು ಮತ್ತು ಗ್ರೇಗ್ರಾನೈಟ್‌ಗೆ ಐದು ಲೀಸುಗಳನ್ನು ಮಂಜೂರು ಮಾಡಿದೆ.

ಈ ಕೆಳಕಂಡವರು ಗ್ರಾನೈಟ್ ಕಲ್ಲನ್ನು ಸಾಗಾಣಿಕೆ ಮಾಡುತ್ತಿದ್ದಾರೆ.

ಕ್ರಮ ಸಂಖ್ಯೆ	ಕ್ಯೂಎಲ್ ನಂ. ಪಿಂಕ್ ಗ್ರಾನೈಟ್	ಹೆಸರು	ವಿಸ್ತೀರ್ಣ (ಎಕರೆಯಲ್ಲಿ)
೧	೨	೩	೪
೧	೨೭೫೭	ಮೆ. ಸೌತ್ ಇಂಡಿಯಾ ಗ್ರಾನೈಟ್ ಕಂಪನಿ	೩೧.೦೦
೨	೩೨೩೭	ಮೆ. ಮುದ್ದೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್	೭೮–೦೦
೩	೩೦೪೮	,,	೪೫.೦೦
೪	೪೦೩೧	ಮೆ. ಮೈಸೂರು ಮಿನರಲ್ಸ್ ಲಿ.,	೪೧.೨೦
೫	೪೨೯೭	,,	೨೬–೦೦
೬	೫೧೮೩	,,	೧೧೦–೦೦
		ಗ್ರೇಗ್ರಾನೈಟ್	
೧	೩೧೭೮	ಶ್ರೀಮತಿ ನಿರ್ಮಲ ಎಸ್. ಆಚಾರ್ಯ	೫೮–೦೦
೨	೩೧೭೯	ಶ್ರೀ ಬಿ. ಎಸ್. ಬಸವರಾಜ್	೬೨–೦೦
೩	೩೨೬೯	ಮೆ. ಶ್ರೀ ಪಿ. ಕೆ. ಆರ್. ಎಕ್ಸ್‌ಪೋರ್ಟ್ಸ್	೧೯–೨೦
೪	೩೫೧೦	ಶ್ರೀ ಟಿ. ಆರ್. ಎನ್. ಸ್ವಾಮಿ	೫೪–೦೦
೫	೩೬೯೪	ಶ್ರೀ ಟಿ. ಆರ್ ಎನ್. ಸ್ವಾಮಿ	೩–೮೦